**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 379/2023**

**ಸಿ.ಡಬ್ಲ್ಯೂಃ , ಪಿ.ಡಬ್ಲ್ಯೂಃ**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾರಾಯಣ ಜಿ . ಬೋಯರ್ |
| ತಂದೆಯ ಹೆಸರು | : | ಗೋಪಾಲ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಕರಾವಳಿ ಪೊಲೀಸ್ ಠಾಣೆ, ಭಟ್ಕಳ |
| ವಾಸ್ತವ್ಯ | : | ಪೊಲೀಸ್ ವಸತಿ ಗೃಹ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04/08/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2017 ರಿಂದ 2023 ರವರೆಗೆ ಎ ಎಸ್ ಐ ಆಗಿ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 14.10.2022 ರಂದು ಭಟ್ಕಳ ಠಾಣೆಯಲ್ಲಿ ಎಸ್ ಹೆಚ್ ಒ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಬಂದು ನಮ್ಮ ಎಕ್ಟಿವಾ ಮೋಟಾರು ಬೈಕು ಕಳುವು ಆದ ಬಗ್ಗೆ ನೀಡಿದ ದೂರನ್ನು ಪಡೆದು ಸಾಯಂಕಾಲ 20.18 ಕ್ಕೆ ದಾಖಲಿಸಿರುತ್ತೇನೆ. ದಿಃ 14.10.2022 ರಂದು ಗುನ್ನಾ ಸ್ಥಳದ ಪಂಚನಾಮೆಗೆ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಗುನ್ನಾ ಸ್ಥಳಕ್ಕೆ ಹೋಗಿದ್ದು ಇರುತ್ತದೆ. ಪಿರ್ಯಾದಿಯು ಗುನ್ನಾ ಸ್ಥಳವನ್ನು ತೋರಿಸಿದ್ದು ಪಂಚರ ಸಮಕ್ಷಮ ಪಂಚನಾಮೆಯನ್ನು ಸಂಜೆ 17.30 ರಿಂದ 18.30 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ. ವಾಹನದ ಮೌಲ್ಯ ಅಂದಾಜು ರೂ. 35,000 ಇರಬಹುದು, ವಾಹನದ ಸಂಖ್ಯೆ: ಕೆಎ 47 ಆರ್ 9027 ಆಗಿದೆ. ಪಂಚನಾಮೆಯನ್ನು ಸಿದ್ದಪ್ಪ ಕಾಂಬಳೆ ಎಂಬ ಸಿಬ್ಬಂದಿಯವರು ಕೈ ಬರಹದಲ್ಲಿ ಬರೆದಿರುತ್ತಾರೆ. ದಿಃ 19.10.2022 ರಂದು ಕೋಟೇಶ್ವರದಲ್ಲಿ ಇರುವ ಆರೋಪಿತರ ಮನೆಯ ಎದುರಿಗೆ 2 ಪಂಚರನ್ನು ಬರಮಾಡಿ ಜಪ್ತು ಪಂಚನಾಮೆಯನ್ನು ಬೆಳಿಗ್ಗೆ 11.45 ರಿಂದ 12.45 ಗಂಟೆಯವರೆಗೆ ಮಾಡಿರುತ್ತಾರೆ. ಆಗ ಪೊಟೋ ತೆಗೆದಿರುತ್ತೇವೆ. ದಿಃ 19.10.2022 ರಂದು ಸ್ವತ್ತು ಪಟ್ಟಿಯನ್ನು ನಂಬರ್ 58/2022 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿದ್ದು ಇರುತ್ತದೆ. ಪಿರ್ಯಾದಿಯ ಮರುಹೇಳಿಕೆಯನ್ನು ದಿಃ 15.10.2022 ರಂದು ಪಡೆದಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಪಿ ಎಸ್ ಐ ರವರು ವಹಿಸಿಕೊಂಡಿದ್ದು ಇರುತ್ತದೆ.

2. ಸಾಕ್ಷಿಯು ನಿಪಿ–1 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಮತ್ತು 5 ಪೊಟೋಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–3 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಪಿರ್ಯಾದನ್ನು ದಾಖಲಿಸುವ ಕಾಲಕ್ಕೆ ದಿಃ 01.09.2022 ರಿಂದ 02.09.2022 ರವೆರೆಗೆ ಘಟನೆ ಆದ ಬಗ್ಗೆ ಹೇಳಿರುತ್ತಾರೆ. ಪಿರ್ಯಾದಿಯ ಮನೆ ಮತ್ತು ನಮ್ಮ ಪೊಲೀಸ್ ಠಾಣೆಗೆ ಸುಮಾರು 500 ಮೀಟರ್ ಅಂತರ ಇರಬಹುದು ದಿಃ 14.10.2022 ರ ಮೊದಲು ಹೊಂಡಾ ಎಕ್ಟಿವಾ ವಾಹನ ಕಳುವಾಗಿದೆ ಎಂದು ಈ ಮೊದಲು ನಮ್ಮ ಠಾಣೆಯಲ್ಲಿ ಯಾವುದೇ ದೂರನ್ನು ದಾಖಲಿಸಿಲ್ಲ. ಪ್ರ ವ.ವರದಿಯನ್ನು ದಾಖಲಿಸುವ ಕಾಲಕ್ಕೆ ಪಿರ್ಯಾದಿಯನ್ನು ನೀಡಲು ವಿಳಂಭವಾದ ಕಾರಣವನ್ನು ನಾವು ತನಿಖೆ ಮಾಡಿಲ್ಲ. ಗುನ್ಹಾ ಸ್ಥಳದ ಪಂಚನಾಮೆಗೆ ರಸ್ತೆಯಲ್ಲಿದ್ದ ಪಂಚರನ್ನು ನಾವೇ ಕರೆದುಕೊಂಡು ಬಂದಿರುತ್ತೇವೆ. ಪಿರ್ಯಾದಿಯ ಮನೆಯ ಕಂಪೌಂಡಿನ ಒಳಗಡೆ ವಾಹನ ಕಳ್ಳತನ ಆಗಿರುತ್ತದೆ. ಪಿರ್ಯಾದಿಯ ಮನೆಯ ಕಂಪೌಂಡಿಗೆ ಗೇಟು ಇದೆ ಹಾಗೂ ಲಾಕ್ ಇರಬಹುದು. ನನ್ನ ತನಿಖಾ ಕಾಲಕ್ಕೆ ಪಿರ್ಯಾದಿಯ ಮನೆಯ ಗೇಟನ್ನು ಲಾಕ್ ಮಾಡಿದ್ದ ಬಗ್ಗೆ ವಿಚಾರಿಸಿದಾಗ ಲಾಕ್ ಹಾಕುವುದಿಲ್ಲವೆಂದು ಅವರು ಹೇಳಿರುತ್ತಾರೆ. ಗುನ್ಹಾ ಸ್ಥಳದ ಪಂಚನಾಮೆ ಕಾಲಕ್ಕೆ ಪಂಚನಾಮೆಯನ್ನು ಸಿದ್ದಪ್ಪ ಕಾಂಬ್ಳೆ ಎಂಬ ಸಿಬ್ಬಂದಿಯವರು ಬರೆದಿರುತ್ತಾರೆ ಹಾಗೂ ಪೊಟೋವನ್ನು ತೆಗೆದಿರುತ್ತಾರೆ. ಜಪ್ತು ಪಂಚನಾಮೆಗೆ ಆದ ಪಂಚರನ್ನು ಸದರಿ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡಿಲ್ಲ. ಸದರಿ ಪಂಚನಾಮೆಯನ್ನು ಸಿದ್ದಪ್ಪ ಕಾಂಬ್ಳೆ ಎಂಬ ಸಿಬ್ಬಂದಿಯವರು ಬರೆದಿರುತ್ತಾರೆ . ಜಪ್ತು ಪಂಚನಾಮೆ ಮಾಡುವ ಸ್ಥಳದಲ್ಲಿ ಒಂದೇ ವಾಹನ ಇತ್ತು. ಬೇರೆ ಯಾವುದೇ ವಾಹನ ಹಾಗೂ ವಸ್ತುಗಳು ಆಗ ಇರಲಿಲ್ಲ. ಸದರಿ ಕಾಲಕ್ಕೆ ಪೊಟೋವನ್ನು ಸಿದ್ದಪ್ಪ ಕಾಂಬ್ಳೆ ಎಂಬ ಸಿಬ್ಬಂದಿಯವರು ಮಾಡಿರುತ್ತಾರೆ. ಪಂಚನಾಮೆಗೆ ನಾನು ಹಾಗೂ ಇಬ್ಬರು ಸಿಬ್ಬಂದಿಗಳು ಹೋಗಿರುತ್ತೇವೆ. ನಮ್ಮ 4 ಜನರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಜಪ್ತು ಪಂಚನಾಮೆ ಮಾಡಿದ ಸ್ಥಳಕ್ಕೆ ಹೊಂದಿಕೊಂಡು ರಾಷ್ಟ್ರೀಯ ಹೆದ್ದಾರಿ,ಅದರ ಅಕ್ಕಪಕ್ಕ ಸಾಕಷ್ಟು ಮನಗಳು ಇವೆ ಎಂದರೆ ಕಣ್ಣಳತೆಯ ದೂರದಲ್ಲಿ ಮನೆಗಳು ಇವೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ಜನರು ಸೇರಿದ್ದ ಬಗ್ಗೆ ನಾವು ಗಮನಿಸಿಲ್ಲ. ಆರೋಪಿಯನ್ನು ನಾವು ಬಂಧಿಸಿಲ್ಲ. ಜಪ್ತು ಪಂಚನಾಮೆ ಮಾಡುವ ಕಾಲಕ್ಕೆ ಆರೋಪಿ

ಯಾರು ಎಂದು ನಮಗೆ ಗೊತ್ತಿತ್ತು. ಆರೋಪಿತನ ವಿರುದ್ದ ಒಂದೇ ದಿನ 12 ಪ್ರಕರಣಗಳನ್ನು ನಮ್ಮ ಠಾಣೆಯಲ್ಲಿ ದಾಖಲಿಸಿಕೊಂಡಿರುತ್ತೇವೆ. ಆ ಎಲ್ಲಾ ಪಂಚನಾಮೆಗಳನ್ನು ದಿಃ 19.10.2022 ರಂದು ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಎಲ್ಲಾ 12 ಪ್ರಕರಣಗಳಲ್ಲಿ ಒಂದೇ ಜಪ್ತು ಪಂಚನಾಮೆಯನ್ನು ನಾನು ಮಾಡಿರುತ್ತೇನೆ. ಆರೋಪಿಗೂ ಮುದ್ದೆಮಾಲಿಗೂ ಯಾವದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಯ ತಾಬಾದಿಂದ ಯಾವುದೇ ವಸ್ತು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**